**ಓ ಎಸ್ ನಂಃ 220-15**
**ಡಿ ಡಬ್ಲ್ಯೂ ಃ 1**

**ದಿಃ 05-10-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್ ಸಿ ಕೆ ವಕೀಲರಿಂದ**

**30.** ನಾನು 1970 ರಲ್ಲಿ ಬೆಂಗಳೂರಿಗೆ ಬಂದಾಗ ನನ್ನ ವಯಸ್ಸು 19 ವರ್ಷ ಇತ್ತು. ನಾನು ಬೆಂಗಳೂರಿಗೆ ಬಂದಾಗ 7 ಮತ್ತು 11 ನೇ ಪ್ರತಿವಾದಿಗಳು ಅಲ್ಪಾವಯಿಗಳು ಆಗಿದ್ದರು ಎಂದರೆ ನಿಜ. 5 ಮತ್ತು 6 ನೇ ಪ್ರತಿವಾದಿಗಳು ನನಗಿಂತ ದೊಡ್ಡವರಾಗಿದ್ದು ಅವರಾದ ನಂತರ ನಾನು ಹುಟ್ಟಿರುತ್ತೇನೆ. ನನ್ನ ನಂತರ ಇಬ್ಬರು ಮಕ್ಕಳು ತೀರಿಕೊಂಡಿದ್ದು ನಂತರ 7 ನೇ ಪ್ರತಿವಾದಿ ಜನಿಸಿರುತ್ತಾರೆ. 1970 ರಲ್ಲಿ 7 ನೇ ಪ್ರತಿವಾದಿಯ ವಯಸ್ಸು 13-14 ವರ್ಷ ಇರುತ್ತದೆ. 7 ನೇ ಪ್ರತಿವಾದಿಯ ನಂತರ 8 ನೇ ಪ್ರತಿವಾದಿ ಜನಿಸಿರುತ್ತಾರೆ. ನಂತರ 9 ನೇ ಪ್ರತಿವಾದಿ ಜನಿಸಿದ್ದು, 1970 ರಲ್ಲಿ ಅವರಿಗೆ ಸುಮಾರು 10 ವರ್ಷ ವಯಸ್ಸು ಇತ್ತು ಎಂದರೆ ನಿಜ. ನಂತರ 10 ನೇ ಪ್ರತಿವಾದಿ ನಂತರ 11 ನೇ ಪ್ರತಿವಾದಿ ಜನಿಸಿರುತ್ತಾರೆ ಎಂದರೆ ನಿಜ. 1970 ರಲ್ಲಿ 11 ನೇ ಪ್ರತಿವಾದಿಗೆ 6 ವರ್ಷ ವಯಸ್ಸು ಇರಬಹುದು ಎಂದರೆ ನಿಜ. 1975 ರಲ್ಲಿ ಜಾರಕಬಂಡೆ ಕಾವಲ್ ನಲ್ಲಿ ಆಸ್ತಿಯನ್ನು ನಾನು ಖರೀದಿ ಮಾಡಿರುತ್ತೇನೆ ಎಂದು ನಾನು ಹೇಳಿದ್ದು ಆಗ ನಾನು ನಿರುದ್ಯೋಗಿ ಆಗಿರುತ್ತೇನೆ ಮತ್ತು 7 ದ 9 ಮತ್ತು 11 ನೇ ಪ್ರತಿವಾದಿಗಳು ಅಲ್ಪಾವಯಿಗಳು ಆಗಿದ್ದರು ಎಂದರೆ ನಾನು 1974 ರಲ್ಲಿ ಜಾರಕಬಂಡೆ ಕಾವಲ್ ನಲ್ಲಿ ಆಸ್ತಿ ಖರೀದಿ ಮಾಡಿದ್ದೆ ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನ್ನ ಕಡೆ ಹಣ ಇಲ್ಲದೇ ಇದ್ದಿದ್ದರಿಂದ ನನ್ನ ಮಾವ ಹನುಮಂತಪ್ಪ ಮತ್ತು ಬಾಮೈದರು ಆ ಆಸ್ತಿಯನ್ನು ನನ್ನ ಹೆಂಡತಿಯ ಅರಿಶಿನ ಕುಂಕುಮಕ್ಕೆಂದು ಖರೀದಿ ಮಾಡಿ ನನ್ನ ಹೆಸರಿಗೆ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಯನ್ನು ಖರೀದಿ ಮಾಡಲು ನನ್ನ ತಂದೆಯಾಗಲೀ, ನನ್ನದೊಡ್ಡಣ್ಣನಾಗಲೀ ಮತ್ತು 3 ಜನ ನನ್ನ ತಮ್ಮಂದಿರು ನನಗೆ ಯಾವುದೇ ಹಣದ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ಕಾರಣ ನಮ್ಮ ಮನೆಯಲ್ಲಿ ಹಣದ ಉಳಿತಾಯ ಆಗುತ್ತಿರಲಿಲ್ಲ ಬಂದ ಹಣ ಜೀವನಕ್ಕಾಗಿ ಸಾಕಾಗುತ್ತಿತ್ತು ಎಂದರೆ ಸರಿಯಲ್ಲ. 1975 ರಲ್ಲಿ 7, 9 ಮತ್ತು 11 ನೇ ಪ್ರತಿವಾದಿಗಳು ಅಲ್ಪಾವಯಿಗಳು ಆಗಿದ್ದರಿಂದ ಅವರಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ನನಗೆ ಇತ್ತು ಎಂದು ಹೇಳುತ್ತಾರೆ.

**31.** ನಾವು ಯಶವಂತಪುರದ ಬಿ ಕೆ ನಗರದಲ್ಲಿ ಒಂದು ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಈ ಆಸ್ತಿಯನ್ನು ನಾವು 5 ಸಾವಿರ ರೂಗಳಿಗೆ ಖರೀದಿ ಮಾಡಿರುತ್ತೇವೆ. ನಮ್ಮ ಜಮೀನಿನಲ್ಲಿ ಅಕ್ಕಿ ರಾಗಿ

ಬೆಳೆಗಳನ್ನು ಬೆಳೆಯುತ್ತಿದ್ದು ಅದರಿಂದ ಬಂದ ಆದಾಯದಿಂದ ಈ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಯಶವಂತಪುರದ ಆಸ್ತಿಯನ್ನು ಖರೀದಿ ಮಾಡಲು 5 ಸಾವಿರ ರೂ ಹಣವನ್ನು ನನ್ನ ತಂದೆ ಕೊಟ್ಟಿರುತ್ತಾರೆ. ಈ ಬಗ್ಗೆ ದಾಖಲೆ ಇದೆಯಾ ಎಂದರೆ ದಾಖಲೆ ಇರುವುದಿಲ್ಲ ಎಂದು ಹೇಳುತ್ತಾರೆ. ಯಶವಂತಪುರದ ಆಸ್ತಿಯನ್ನು ಖರೀದಿ ಮಾಡಲು ನನ್ನ ಮಾವ ಹನುಮಂತಪ್ಪ ಮತ್ತು ನನ್ನ ಬಾಮೈದರು ಹಣದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಆಸ್ತಿಯನ್ನು ಖರೀದಿ ಮಾಡಲು ನನ್ನ ತಂದೆ ಮತ್ತು ನನ್ನ ಸಹೋದರರ ಕೊಡುಗೆ ಇಲ್ಲ ಎಂದರೆ ನನ್ನ ತಂದೆ ಸಹಾಯ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಯಶವಂತಪುರದ ಆಸ್ತಿಯನ್ನು ನನ್ನ ಮಾವ ನನ್ನ ಹೆಂಡತಿಯ ಮೇಲಿನ ಪ್ರೀತಿಗಾಗಿ ಅರಿಶಿನ ಕುಂಕುಮಕ್ಕೋಸ್ಕರ ಆ ಆಸ್ತಿಯನ್ನು ನನ್ನ ಹೆಸರಿಗೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1975 ಮತ್ತು ಅದರ ಮೊದಲು ಹೆಣ್ಣಿನ ಮನೆಯವರು ಗಂಡಿಗೆ ವರದಕ್ಷಿಣೆ ಕೊಡುತ್ತಿದ್ದರು ಎಂದರೆ ಸರಿಯಲ್ಲ. ಹಳೆಯ ಸಂಪ್ರದಾಯದ ಪ್ರಕಾರ ಹೆಣ್ಣಿನ ಕಡೆಯವರು ಗಂಡಿನ ಹೆಸರಿಗೆ ಆಸ್ತಿಗಳನ್ನು ವರದಕ್ಷಿಣೆಯಾಗಿ ಕೊಡುತ್ತಿದ್ದರು ಎಂದರೆ ಸರಿಯಲ್ಲ.

32. ಯಶವಂತಪುರದ ಆಸ್ತಿಯನ್ನು ದಿನಾಂಕಃ 17-12-1979 ರಲ್ಲಿ ಖರೀದಿ ಮಾಡಲಾಯಿತು. ಅದನ್ನು ನಂಜಪ್ಪರೆಡ್ಡಿರವರ ಕಡೆಯಿಂದ ಖರೀದಿ ಮಾಡಿರುತ್ತೇವೆ. ಜಾರಕಬಂಡೆ ಕಾವಲ್ ನಲ್ಲಿರುವ ನಿವೇಶನದಲ್ಲಿ 1978-79 ರಲ್ಲಿ ಮನೆ ಕಟ್ಟಿರುತ್ತೇನೆ. ಅಲ್ಲಿ ಒಂದು ಶೀಟಿನ ಮನೆಯನ್ನು ಕಟ್ಟಿರುತ್ತೇನೆ. 1979 ರಲ್ಲಿ ನರಸಮ್ಮರವರು ಆ ಮನೆಯನ್ನು ದೇವರಾಜಯ್ಯರವರಿಗೆ 10 ಸಾವಿರ ರೂಗಳಿಗೆ ಲೀಸ್ ಮೇಲೆ ಕೊಟ್ಟಿದ್ದರು. ಅದನ್ನು 2 ವರ್ಷ ಲೀಸ್ ಗೆ ಕೊಟ್ಟಿದ್ದರು. ಆಗ ನಾನು ಬೇರೆ ಬಾಡಿಗೆ ಮನೆಯಲ್ಲಿ ವಾಸವಿದ್ದೆ. ನರಸಮ್ಮರವರು ನನ್ನನ್ನು ಬಿಟ್ಟು ಆಗಲೇ 20 ವರ್ಷ ಆಗಿತ್ತು ಆದ ಕಾರಣ ನನ್ನ ಮತ್ತು ನರಸಮ್ಮರವರ ಮಧ್ಯೆ ಸಂಬಂಧ ಇರಲಿಲ್ಲ.

33. ಯಶವಂತಪುರದ ನಿವೇಶನದಲ್ಲಿ 3 ಶೀಟಿನ ಮನೆಗಳನ್ನು ಕಟ್ಟಿರುತ್ತೇನೆ. ಅವುಗಳನ್ನು ಬಾಡಿಗೆಗೆ ಕೊಟ್ಟಿರುತ್ತೇವೆ. ಆ ಮನೆಗಳನ್ನು ನಾನೇ ಬಾಡಿಗೆಗೆ ಕೊಟ್ಟಿದ್ದೆ. ಮನೆಗಳನ್ನು 1981-82 ರಲ್ಲಿ ಕಟ್ಟಿದ್ದು ಅವುಗಳನ್ನು 5 ಸಾವಿರ, 3 ಸಾವಿರ ಮತ್ತು 2 ಸಾವಿರ ರೂಗಳಿಗೆ ಬಾಡಿಗೆಗೆ ಕೊಟ್ಟಿದ್ದೆ. ಯಶವಂತಪುರದ ನಿವೇಶನದ ವಿಸ್ತೀರ್ಣ 17 1/2 * 61 ಅಡಿ ಇರುತ್ತದೆ. ನಿವೇಶನ 61 ಅಡಿ ಉದ್ದ ಇದ್ದು ಅದರ ಪಶ್ಚಿಮಕ್ಕೆ ರಸ್ತೆ ಇರುತ್ತದೆ. ಎರಡು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಲು ಎಷ್ಟು ವೆಚ್ಚ ಆಗಿರುತ್ತದೆ ಗೊತ್ತಿಲ್ಲ. ಯಶವಂತಪುರದಲ್ಲಿ ಕಟ್ಟಿರುವ ಮನೆಗಳ ಮೂಲಕ ಬಂದ ಬಾಡಿಗೆಯನ್ನು ಸಂಸಾರಕ್ಕಾಗಿ ಉಪಯೋಗಿಸುತ್ತಿದ್ದೆ. ಆಗ ನನಗೆ 4 ಜನ ಮಕ್ಕಳು ಇದ್ದರು. ಅಷ್ಟು ಹಣ ನನ್ನ ಮಕ್ಕಳ ವಿದ್ಯಾಭ್ಯಾಸ ಮತ್ತು ಸಂಸಾರಕ್ಕೆ ಸಾಕಾಗುತ್ತಿತ್ತು. ಎರಡು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಲು ನನ್ನ ಮಾವ ಹನುಮಂತಪ್ಪ ಮತ್ತು ಬಾಮೈದರು ಹಣದ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎರಡು

ನಿವೇಶನಗಳಲ್ಲಿ ಮನೆಗಳನ್ನು ಕಟ್ಟುವಾಗ ನಾನು ಖಾಸಗಿ ಕಾರ್ಖಾನೆಯಲ್ಲಿ ಜೀವನೋಪಾಯಕ್ಕಾಗಿ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಆದ ಕಾರಣ ನನ್ನ ಮಾವನವರು ಮತ್ತು ಬಾಮೈದರು ಮುತುವರ್ಜಿ ವಹಿಸಿ ಎರಡು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ ಕಾರಣ ಎರಡು ನಿವೇಶನಗಳಲ್ಲಿ ಮನೆಗಳನ್ನು ಕಟ್ಟಲು ಎಷ್ಟು ಖರ್ಚು ಆಗಿದೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**34.** ಜಾರಕಬಂಡೆ ಕಾವಲ್ ಮತ್ತು ಯಶವಂತಪುರದ ನಿವೇಶನಗಳಲ್ಲಿ ನನ್ನ ಮಾವ ಮತ್ತು ಬಾಮೈದರು ನಿವೇಶನಗಳನ್ನು ಖರೀದಿ ಮಾಡಿ ಮನೆಗಳನ್ನು ಕಟ್ಟಿದ್ದರಿಂದ ಅವುಗಳ ಉಸ್ತುವಾರಿಯನ್ನು ನನ್ನ ಹೆಂಡತಿ ನರಸಮ್ಮ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಆದ ಕಾರಣ ನರಸಮ್ಮರವರು ಜಾರಕಬಂಡೆ ಕಾವಲ್ ನಲ್ಲಿರುವ ಆಸ್ತಿಯನ್ನು ದೇವರಾಜಯ್ಯರವರಿಗೆ ಭೋಗ್ಯಕ್ಕೆ ಕೊಟ್ಟಿದ್ದರು ಎಂದರೆ ನರಸಮ್ಮರವರು ನನ್ನಿಂದ ಬೇರೆಯಾದ ಮೇಲೆ ಆ ರೀತಿಯಾಗಿ ಭೋಗ್ಯಕ್ಕೆ ಕೊಟ್ಟಿದ್ದರು ಎಂದು ಹೇಳುತ್ತಾರೆ.

**35.** ವಾದಿಗಳು ನನ್ನ ಮಕ್ಕಳು ಎಂದರೆ ನಿಜ. **1**ನೇ ವಾದಿ **1976**ರಲ್ಲಿ, **2**ನೇ ವಾದಿ **1978**ರಲ್ಲಿ, **3**ನೇ ವಾದಿ **1980**ರಲ್ಲಿ, **4**ನೇ ವಾದಿ **1982**ರಲ್ಲಿ ಜನಿಸಿರುತ್ತಾರೆ. ನಂತರ ನಾನು, ನನ್ನ ಹೆಂಡತಿ ಮತ್ತು ವಾದಿಗಳು ಒಂದೇ ಮನೆಯಲ್ಲಿ ವಾಸವಿದ್ದೆವು ಎಂದರೆ ನಿಜ. **1990**ರಲ್ಲಿ ನನ್ನ ಮತ್ತು ನನ್ನ ಹೆಂಡತಿ ನರಸಮ್ಮರವರ ಮದ್ಯೆ ಮನಸ್ತಾಪ ಉಂಟಾಗಿರುತ್ತದೆ. ನರಸಮ್ಮರವರು **50** ಸಾವಿರ, **20** ಲಕ್ಷ ರೂಗಳಿಗೆ ಚೀಟಿ ವ್ಯವಹಾರ ಮಾಡುತ್ತಿದ್ದು ಅದನ್ನು ಮಾಡಬೇಡವೆಂದು ನಾನು ಹೇಳಿದ್ದೆ ಅವರು ನನ್ನ ಮಾತನ್ನು ಕೇಳಲಿಲ್ಲ ಈ ಬಗ್ಗೆ ನನ್ನ ಮತ್ತು ನರಸಮ್ಮರವರ ಮದ್ಯೆ ಮನಸ್ತಾಪ ಉಂಟಾಗಿರುತ್ತದೆ. **1980**ರಿಂದ ನರಸಮ್ಮರವರು ಚೀಟಿ ವ್ಯವಹಾರ ಮಾಡುತ್ತಿದ್ದರು. ನನ್ನ ಹೆಂಡತಿಯ ಅಣ್ಣ ಮುನಿಸಿದ್ದಪ್ಪರವರು ನಾನು ಕೆಲಸಕ್ಕೆ ಹೋದಾಗ ಮುನಿಸಿದ್ದಪ್ಪರವರು ನಮ್ಮ ಮನೆಗೆ ಬಂದು ಚೀಟಿ ವ್ಯವಹಾರ ಮಾಡುತ್ತಿದ್ದರು. **1990**ರವರೆಗೆ ನಾನು ಮತ್ತು ನನ್ನ ಹೆಂಡತಿ ಅನ್ಯೋನ್ಯವಾಗಿದ್ದೆವು ಎಂದರೆ ಸರಿಯಲ್ಲ. ನನ್ನ ಹೆಂಡತಿ ತಮ್ಮ ತಂದೆಯ ಮನೆಗೆ ಬಡವರ ಮನೆಗೆ ಬಟ್ಟೆ ವ್ಯಾಪಾರ ಮಾಡಲು ಹೋಗುತ್ತಿದ್ದರು. ಅದಕ್ಕೆ ನಾನು ತಕರಾರು ಮಾಡಿದ್ದು ಆದ ಕಾರಣ ನರಸಮ್ಮರವರು ಮನೆ ಖಾಲಿ ಮಾಡಿಕೊಂಡು ಹೋಗಿರುತ್ತಾರೆ. ನರಸಮ್ಮರವರು **1992**ರಲ್ಲಿ ಮನೆ ಖಾಲಿಮಾಡಿಕೊಂಡು ಹೋಗಿರುತ್ತಾರೆ. **1992**ರಲ್ಲಿ ನನ್ನ ಮತ್ತು ನರಸಮ್ಮರವರ ಮದ್ಯೆ ಮನಸ್ತಾಪ ಆದಾಗ ನಂತರ ವಾದಿಗಳ ಯೋಗಕ್ಷೇಮವನ್ನು ಯಾರು ನೋಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಮತ್ತು ವಾದಿಗಳ ಮದ್ಯೆ ಮನಸ್ತಾಪ ಇರಲಿಲ್ಲ ಎಂದರೆ ನನ್ನ ಮತ್ತು ವಾದಿಗಳ ಮದ್ಯೆ ಒಡನಾಟ ಇರಲಿಲ್ಲ ವಾದಿಗಳು ತಮ್ಮ ತಾಯಿಯ ಜೊತೆ ಹೋಗಿರುತ್ತಾರೆ. ನಾನು ನರಸಮ್ಮ ಮತ್ತು ವಾದಿಗಳನ್ನು ಬಿಟ್ಟು ಹೋದ ನಂತರ ನರಸಮ್ಮರವರೇ ವಾದಿಗಳಿಗೆ ವಿದ್ಯಾಭ್ಯಾಸ ಕೊಡಿಸಿ ಮದುವೆ ಮಾಡಿರುತ್ತಾರೆ ಎಂದರೆ ನಾನೇ ವಿದ್ಯಾಭ್ಯಾಸ ಕೊಡಿಸಿದ್ದೆ ಎಂದು ಹೇಳುತ್ತಾರೆ.

36. ಯಶವಂತಪುರದಲ್ಲಿ ಮನೆಗಳ ಬಾಡಿಗೆಯನ್ನು ನರಸಮ್ಮರವರು 1993 ರಿಂದ ಪಡೆಯಲು ಶುರು ಮಾಡಿರುತ್ತಾರೆ. ಎರಡು ನಿವೇಶಗಳಲ್ಲಿರುವ ಮನೆಗಳಿಂದ ನರಸಮ್ಮರವರೇ ಬಾಡಿಗೆ ಪಡೆಯುತ್ತಿದ್ದರು ಎಂದು ತೋರಿಸಲು ನನ್ನ ಕಡೆ ದಾಖಲೆ ಇಲ್ಲ. ನರಸಮ್ಮರವರು ಯಾವುದೇ ಕಾನೂನು ಬಾಹಿರ ವ್ಯವಹಾರ ಮಾಡುತ್ತಿರಲಿಲ್ಲ ನಾನು ನರಸಮ್ಮರವರನ್ನು ಚೆನ್ನಾಗಿ ನೋಡಿಕೊಳ್ಳದೇ ಇರುವುದರಿಂದ ಜೀವನೋಪಾಯಕ್ಕೆ ಅವರು ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನರಸಮ್ಮ ಅವರ ಜೀವನೋಪಾಯಕ್ಕೆ ಕಷ್ಟ ಆಗಿದ್ದರಿಂದ ಅವರು ನನ್ನ ವಿರುದ್ದ ಜೀವನಾಂಶಕ್ಕಾಗಿ ಒಂದು ಮೊಕದ್ದಮೆ ಹೂಡಿದ್ದರು ಎಂದರೆ ಹೂಡಿದ್ದರು ಎಂದು ಹೇಳುತ್ತಾರೆ. ಆದರೂ ಸಹ ನಾನು ನನ್ನ ಹೆಂಡತಿ ಮಕ್ಕಳಿಗೆ ಜೀವನಾಂಶ ಕೊಡಲಿಲ್ಲ ಎಂದರೆ ನಿಜ. ಕಾರಣ ಅವರು ಮನೆಯಿಂದ ಬಂದ ಬಾಡಿಗೆಯನ್ನು ಪಡೆಯುತ್ತಿದ್ದರು. ಕಾರಣಾಂತರಗಳಿಂದ ಜೀವನಾಂಶದ ಮೊಕದ್ದಮೆ ವಜಾ ಆಗಿರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ನರಸಮ್ಮರವರು ಮನೆಯ ಬಾಡಿಗೆಯನ್ನು ಪಡೆಯುತ್ತಿದ್ದು ಮಕ್ಕಳು ಕೆಲಸಕ್ಕೆ ಹೋಗುತ್ತಿದ್ದರು ಈ ವಿಷಯವನ್ನು ಪರಿಗಣಿಸಿ ಮೊಕದ್ದಮೆಯನ್ನು ವಜಾ ಮಾಡಿದ್ದರು ಎಂದು ಹೇಳುತ್ತಾರೆ. ಆ ಮೊಕದ್ದಮೆಯ ಆದೇಶದಲ್ಲಿ ನಾನು ಮತ್ತು ವಾದಿಗಳು ಮತ್ತು ನರಸಮ್ಮ ಒಟ್ಟು ಕುಟುಂಬದಲ್ಲಿ ಇರುವುದಾಗಿ ಹೇಳಿದ್ದರಿಂದ ಅದನ್ನು ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ.

37. ನಾನು ಜೀವನಾಂಶದ ಮೊಕದ್ದಮೆಯಲ್ಲಿ ಸಾಕ್ಷಿ ಕೊಟ್ಟಿರುತ್ತೇನೆ ಎಂದರೆ ನಿಜ. ನಿಡಿ 21 ರಲ್ಲಿ ನಾನು ಖಾಸಗಿ ಕಾರ್ಖಾನೆಯಲ್ಲಿ 1970 ರಿಂದ 1977 ರವರೆಗೆ ಕೆಲಸ ಮಾಡುತ್ತಿದ್ದು ನಂತರ ಅದು ಮುಚ್ಚಿರುತ್ತದೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಬಂದ ಆದಾಯದಿಂದ ನಿವೇಶನಗಳನ್ನು ಖರೀದಿ ಮಾಡಿರುತ್ತೇನೆ ಎಂದು ಹೇಳಿದ್ದು ಅದು ಸರಿಯೋ ತಪ್ಪೋ ಎಂದರೆ ಅದು ತಪ್ಪು ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**